# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2008** |
| ಉತ್ತರಿಸಬೇಕಾದ ದಿನಾಂಕ | : | 16.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗ್ರಾಮೀಣ ಮತ್ತು ನಗರ ಭಾಗದ ನಿವೇಶನ ರಹಿತ ಬಡವರಿಗೆ ನಿವೇಶನ ನೀಡುವ ಯೋಜನೆ ಜಾರಿಯಲ್ಲಿ ಇದೆಯೇ ; ಯಾವಾಗಿನಿಂದ ಜಾರಿಯಲ್ಲಿದೆ ; ಇದರ ಮಾರ್ಗಸೂಚಿಗಳೇನು ; (ವಿವರವಾದ ಮಾಹಿತಿ ನೀಡುವುದು) | ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ನಿವೇಶನ/ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ 2000 ರಲ್ಲಿ ರಾಜೀವ್ ಗಾಂಧಿ ವಸತಿ ನಿಗಮವು ಸ್ಥಾಪನೆಯಾಗಿದ್ದು, ಅರ್ಹ ನಿವೇಶನರಹಿತ ಕುಟುಂಬಗಳಿಗೆ ಕೆಳಕಂಡ ಯೋಜನೆಗಳ ಮೂಲಕ ನಿವೇಶನ ಸೌಕರ್ಯ ಒದಗಿಸಲು ಕ್ರಮ ವಹಿಸಲಾಗುತ್ತಿದೆ.<br><br>**ನಿವೇಶನ ಯೋಜನೆಗಳು:**<br>1. ಮುಖ್ಯ ಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ<br>2. ಮುಖ್ಯ ಮಂತ್ರಿಗಳ ನಗರ ನಿವೇಶನ ಯೋಜನೆ<br><br>ಮೇಲ್ಕಂಡ ನಿವೇಶನ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಗ್ರಾಮ ಸಭೆ/ ನಗರ ಆಶ್ರಯ ಸಮಿತಿ ಮೂಲಕ ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರ ಕೋರಿ ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಯನ್ನಾಧರಿಸಿ ರಾಜೀವ್ ಗಾಂಧಿ ವಸತಿ ನಿಗಮದಿಂದ 2004-05 ನೇ ಸಾಲಿನಿಂದ ಹಕ್ಕುಪತ್ರಗಳನ್ನು ನೀಡಲಾಗುತ್ತಿದೆ.<br><br>ಆಶ್ರಯ ಯೋಜನೆಯಡಿ ವಸತಿ/ನಿವೇಶನ ಸೌಲಭ್ಯ ಪಡೆಯಲು ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ.<br><br>1. ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ) ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.<br>2. ಅರ್ಜಿದಾರರು ಕಡ್ಡಾಯವಾಗಿ ಸಂಭಂಧಪಟ್ಟ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವಾಸವಾಗಿರಬೇಕು.<br>3. ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ. 32000/- ಕ್ಕಿಂತ ಕಡಿಮೆ ಹಾಗೂ ನಗರ ಪ್ರದೇಶದವರಾಗಿದ್ದಲ್ಲಿ ರೂ.87,600/- ಕ್ಕಿಂತ ಕಡಿಮೆ ಇರಬೇಕು.<br>4. ಅರ್ಜಿದಾರರ ಕುಟುಂಬವು ವಸತಿರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ನಿವೇಶನ/ಮನೆ ಹೊಂದಿರಬಾರದು. (ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ವಸತಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.) |

<table>
<tr>
<td></td>
<td></td>
<td>5. ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)<br>6. ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ಕೊಡಗು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅರಣ್ಯ ಜಾಗದಲ್ಲಿ ಕಚ್ಚಾಮನೆ/ಗುಡಿಸಲು ನಿರ್ಮಿಸಿ ವಾಸ್ತವ್ಯ ಹೊಂದಿರುವ, ಈಗಾಗಲೇ ಗ್ರಾಮ ಪಂಚಾಯಿತಿಯಿಂದ ಮನೆ ನಂಬರ್ ಹೊಂದಿದ್ದು, ಗ್ರಾಮ ಪಂಚಾಯಿತಿಗೆ ಮನೆ ತೆರಿಗೆ ಪಾವತಿಸುತ್ತಿರುವ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಸೌಲಭ್ಯವನ್ನು ಈಗಾಗಲೇ ಪಡೆದುಕೊಂಡಿರುವ ಫಲಾನುಭವಿಗಳಿಗೆ ವಸತಿ ಇಲಾಖೆಯಿಂದ ವಿವಿಧ ವಸತಿ ಯೋಜನೆಗಳಡಿ ಸಹಾಯಧನವನ್ನು ಪಡೆಯಲು ಪರಿಗಣಿಸಬಹುದಾಗಿದೆ.<br>7. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ/ನಿವೇಶನ ಸೌಲಭ್ಯ ಪಡೆದಿರಬಾರದು.</td>
</tr>
<tr>
<td>ಆ)</td>
<td>ಈ ಸಂಬಂಧ ನಿಗಮವು ಪ್ರತಿ ಪಂಚಾಯ್ತಿಗೆ ಮತ್ತು ನಗರ ಭಾಗಕ್ಕೆ ಕನಿಷ್ಠ ಮತ್ತು ಗರಿಷ್ಠ ಎಷ್ಟು ನಿವೇಶನ ಹಂಚಿಕೆ ಗುರಿ ನಿಗಧಿಪಡಿಸಲಾಗಿದೆ ;<br>(ಇದರ ರೂಪುರೇಷೆಗಳೇನು ;)</td>
<td>ಪಂಚಾಯ್ತಿವಾರು/ನಗರ ಸ್ಥಳೀಯ ಸಂಸ್ಥೆವಾರು ಗುರಿ ನಿಗದಿಪಡಿಸುವುದಿಲ್ಲ. ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ನಿಗಧಿಪಡಿಸುವ ಅನುದಾನಕ್ಕೆ ಅನುಗುಣವಾಗಿ ಹಾಗೂ ಜಮೀನಿನ ಲಭ್ಯತೆಗನುಗುಣವಾಗಿ ಅರ್ಹ ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.</td>
</tr>
<tr>
<td>ಇ)</td>
<td>ಈ ಸಂಬಂಧ ಖಾಸಗಿ ಜಮೀನು ಖರೀದಿಸಲು ಇರುವ ಮಾರ್ಗಸೂಚಿಗಳೇನು ; ಈ ಯೋಜನೆಗಾಗಿ ಸರ್ಕಾರವು ಎಷ್ಟು ಹಣವನ್ನು ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಮೀಸಲಿಡಲಾಗಿದೆ ; ಇಲ್ಲಿಯವರೆಗೂ ಎಷ್ಟು ಖರ್ಚು ಮಾಡಲಾಗಿದೆ ; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು)</td>
<td>ಅರ್ಹ ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ವಸತಿ ರಹಿತರು ಸ್ವಂತ ನಿವೇಶನ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಆದರೆ, ಅನೇಕ ಅರ್ಹ ವಸತಿ ರಹಿತರು ನಿವೇಶನಗಳಿಲ್ಲದ ಕಾರಣ ವಸತಿ ಸೌಕರ್ಯದಿಂದ ವಂಚಿತರಾಗುತ್ತಿದ್ದಾರೆ. ಇಂತಹ ಕುಟುಂಬಗಳಿಗೆ ನಿವೇಶನ ಒದಗಿಸಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಮಂಜೂರು ಮಾಡಿಸಿಕೊಂಡು ನಿವೇಶನ ಹಂಚಿಕೆ ಮಾಡಲಾಗುತ್ತಿದೆ. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ಖಾಸಗಿ ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಜಮೀನು ಖರೀದಿ ಸಮಿತಿಯ ಮೂಲಕ ಭೂಮಾಲೀಕರೊಂದಿಗೆ ಸಂಧಾನ ನಡೆಸಿ ಜಮೀನನ್ನು ಖರೀದಿಸಲು ಕ್ರಮ ವಹಿಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ:ವಇ 33 ಹೆಚ್‌ಎಹೆಚ್ 2016 (ಭಾ-2), ದಿನಾಂಕ :12.07.2016 ರಲ್ಲಿ ಜಮೀನು ಖರೀದಿಯ ದರಗಳನ್ನು ಕೆಳಕಂಡಂತೆ ನಿಗದಿಪಡಿಸಲಾಗಿದೆ.<br>
<table>
<tr><th>ಕ್ರ. ಸಂ.</th><th>ಪ್ರದೇಶ</th><th>ನಿಗದಿಪಡಿಸಿರುವ ಗರಿಷ್ಠದರ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಗ್ರಾಮೀಣಪ್ರದೇಶ</td><td>9.00</td></tr>
<tr><td>2</td><td>ಪಟ್ಟಣಪಂಚಾಯಿತಿ</td><td>12.00</td></tr>
</table>
</td>
</tr>
</table>

<table>
<tr><td></td><td></td><td>
<table>
<tr><td>3</td><td>ಪುರಸಭೆ</td><td>15.00</td></tr>
<tr><td>4</td><td>ನಗರಸಭೆ</td><td>22.50</td></tr>
<tr><td>5</td><td>ಮಹಾನಗರಪಾಲಿಕೆ</td><td>37.50</td></tr>
<tr><td>6</td><td>ಬೃಹತ್ ಬೆಂಗಳೂರುಮಹಾನಗರ ಪಾಲಿಕೆ</td><td>75.00</td></tr>
</table>
ಸರ್ಕಾರವು ಆಯವ್ಯಯದಲ್ಲಿ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡದೇ ಒಟ್ಟಾರೆಯಾಗಿ ಯೋಜನಾವಾರು ಬಿಡುಗಡೆ ಮಾಡಲಾಗುತ್ತಿದೆ. 2018-19 ರಿಂದ 2021-22 ರ ಪೆಬ್ರುವರಿ ಅಂತ್ಯಕ್ಕೆ ಯಾವುದೇ ಅನುದಾನವು ಬಿಡುಗಡೆ ಮಾಡಿರುವುದಿಲ್ಲ. ಈ ಹಿಂದೆ ಬಿಡುಗಡೆಯಾದ ಅನುದಾನದ ಪೈಕಿ ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಲಭ್ಯವಿರುವ ಆರಂಭಿಕ ಶಿಲ್ಕು ರೂ.146.76 ಕೋಟಿಗಳಲ್ಲಿ, 2018-19 ರಿಂದ 2021-22 ರ ಜನವರಿ ಅಂತ್ಯದ ವರೆಗೆ ಜಮೀನು ಖರೀದಿಸಲು ಮತ್ತು ಅಭಿವೃದ್ಧಿ ಮಾಡಲು ಸಲ್ಲಿಸಲಾದ ಅರ್ಹ ಪ್ರಸ್ತಾವನೆಗಳ ಆಧಾರದ ಮೇಲೆ ಜಿಲ್ಲಾಧಿಕಾರಿಗಳಿಗೆ ಒಟ್ಟು ರೂ.68.93 ಕೋಟಿಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತ ಹಾಗೂ ಜಿಲ್ಲಾ ಮಟ್ಟದಲ್ಲಿ ಲಭ್ಯವಿದ್ದ ಆರಂಭಿಕ ಶಿಲ್ಕು ರೂ.74.22 ಕೋಟಿಗಳು ಸೇರಿದಂತೆ ಒಟ್ಟು ರೂ.86.65 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ ಒದಗಿಸಲಾಗಿದೆ.
</td></tr>
<tr><td>ಈ)</td><td>ಮೈಸೂರು ಮತ್ತು ತುಮಕೂರು ಜಿಲ್ಲೆಯಲ್ಲಿ ಕಳೆದ 5 ವರ್ಷಗಳಿಂದ ಗ್ರಾಮೀಣ ಮತ್ತು ನಗರ ಭಾಗದ ಎಷ್ಟು ನಿವೇಶನ ರಹಿತರಿಗೆ ನಿವೇಶನ ನೀಡಲಾಗಿರುತ್ತದೆ ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು) ಇದರ ಸಂಬಂಧ ಖರ್ಚು ಮಾಡಿರುವ ಹಣವೆಷ್ಟು ;</td><td>
ಮೈಸೂರು ಜಿಲ್ಲೆಯಲ್ಲಿ ಕಳೆದ 5 ವರ್ಷಗಳಿಂದ ಗ್ರಾಮೀಣ ಭಾಗದಲ್ಲಿ 336 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ತುಮಕೂರು ಜಿಲ್ಲೆಯ ಗ್ರಾಮೀಣ ಭಾಗದಲ್ಲಿ 2128 ನಿವೇಶನಗಳನ್ನು ಹಾಗೂ ನಗರ ಭಾಗದಲ್ಲಿ 272 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಒಟ್ಟು 2736 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
ತಾಲ್ಲೂಕು/ನಗರ ಸ್ಥಳೀಯ ಸಂಸ್ಥೆವಾರು ವಿವರ ಅನುಬಂಧ-2 ಮತ್ತು 3 ರಲ್ಲಿ ಒದಗಿಸಲಾಗಿದೆ.
2016-2017 ರಿಂದ ಇಲ್ಲಿಯವರೆಗೆ ಗ್ರಾಮೀಣ ಮತ್ತು ನಗರ ನಿವೇಶನ ರಹಿತರಿಗೆ ಮೈಸೂರು ಜಿಲ್ಲೆಗೆ ರೂ.14.83 ಕೋಟಿಗಳು ಹಾಗೂ ತುಮಕೂರು ಜಿಲ್ಲೆಗೆ ರೂ.6.83 ಕೋಟಿಗಳ ಅನುದಾನವನ್ನು ಒಟ್ಟಾರೆಯಾಗಿ ರೂ.21.66 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
</td></tr>
<tr><td>ಉ)</td><td>ನಗರ ಮತ್ತು ಗ್ರಾಮೀಣ ಭಾಗದ ಬಡವರಿಗಾಗಿ ಸರ್ಕಾರ ಜಾರಿಗೆ ತಂದಿರುವ ವಸತಿ ಯೋಜನೆಗಳಾವುವು ? (ವಿವರವಾದ ಮಾಹಿತಿ ನೀಡುವುದು)</td><td>
ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅರ್ಹ ವಸತಿರಹಿತರಿಗೆ ವಸತಿ ಸೌಕರ್ಯ ಕಲ್ಪಿಸಲು ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
ಗ್ರಾಮೀಣ ವಸತಿ ಯೋಜನೆಗಳು:-
1 ಬಸವ ವಸತಿ ಯೋಜನೆ<br>2 ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>3 ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)<br>4 ಡಿ. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ)
</td></tr>
</table>

| | | |
|---|---|---|
| | | **ನಗರ ವಸತಿ ಯೋಜನೆಗಳು:-**<br><br>1 ವಾಜಪೇಯಿ ನಗರ ವಸತಿ ಯೋಜನೆ(ನಗರ)<br>2 ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ನಗರ)<br>3 ಡಿ. ದೇವರಾಜು ಅರಸು ವಸತಿ ಯೋಜನೆ(ನಗರ)<br>4 ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) |

ಸಂಖ್ಯೆ :ವಇ 154 ಹೆಚ್‌ಎಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ-1

(ರೂ.ಕೋಟಿಗಳಲ್ಲಿ)

2018-19 ರಿಂದ 2021-22ರ ಅಂತ್ಯಕ್ಕೆ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ

| ಜಿಲ್ಲೆಗಳು | ಆರಂಭಿಕ ಶಿಲ್ಕು | ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನ | | | | | | | ಜಿಲ್ಲೆ ಮಟ್ಟದಲ್ಲಿ ಮಾಡಲಾಗಿರುವ ಖರ್ಚು | | | | |
|---|---|---|---|---|---|---|---|---|---|---|---|---|---|
| | | ಬಿಡುಗಡೆ | | | | | ಜಿಲ್ಲೆಗಳಿಂದ ಹಿಂಪಡೆಯಲಾದ ಅನುದಾನ | ಒಟ್ಟು ಅನುದಾನ | | | | | |
| | | 2018-19 | 2019-20 | 2020-21 | 2021-22 (ಫೆಬ್ರವರಿ ಅಂತ್ಯಕ್ಕೆ) | ಒಟ್ಟು | | | 2018-19 | 2019-20 | 2020-21 | 2021-22 (ಫೆಬ್ರವರಿ ಅಂತ್ಯಕ್ಕೆ) | ಒಟ್ಟು |
| ಬಾಗಲಕೋಟೆ | 7.34 | 0.00 | 0.00 | 0.04 | 0.00 | 0.04 | 7.04 | 0.35 | 0.22 | 0.00 | 0.04 | 0.00 | 0.27 |
| ಬಳ್ಳಾರಿ | 2.22 | 0.00 | 0.00 | 0.26 | 0.20 | 0.46 | 0.00 | 2.68 | 0.45 | 0.00 | 0.26 | 0.00 | 0.71 |
| ಬೆಳಗಾವಿ | 1.88 | 7.01 | 0.58 | 0.00 | 0.15 | 7.74 | 0.00 | 9.62 | 4.57 | 3.06 | 0.00 | 0.15 | 7.78 |
| ಬೆಂಗಳೂರು ಗ್ರಾಮಾಂತರ | 7.79 | 0.02 | 0.00 | 0.00 | 0.06 | 0.08 | 0.00 | 7.86 | 0.00 | 0.00 | 0.00 | 0.00 | 0.00 |
| ಬೆಂಗಳೂರು ನಗರ | 1.98 | 0.00 | 0.11 | 0.03 | 1.03 | 1.17 | 0.00 | 3.15 | 0.00 | 0.05 | 0.14 | 1.06 | 1.25 |
| ಬೀದರ | 0.50 | 0.05 | 0.00 | 0.01 | 0.00 | 0.06 | 0.00 | 0.56 | 0.20 | 0.02 | 0.00 | 0.00 | 0.22 |
| ಚಾಮರಾಜನಗರ | 0.88 | 0.00 | 0.39 | 0.00 | 0.00 | 0.39 | 0.00 | 1.27 | 0.13 | 0.39 | 0.00 | 0.00 | 0.52 |
| ಚಿಕ್ಕಬಳ್ಳಾಪುರ | 1.51 | 1.43 | 0.00 | 0.00 | 0.79 | 2.22 | 1.52 | 2.22 | 0.00 | 1.45 | 0.00 | 0.76 | 2.21 |
| ಚಿಕ್ಕಮಗಳೂರು | 1.21 | 0.30 | 0.06 | 0.06 | 0.00 | 0.41 | 0.34 | 1.28 | 0.46 | 0.28 | 0.52 | 0.01 | 1.27 |
| ಚಿತ್ರದುರ್ಗ | 2.48 | 0.00 | 0.12 | 0.00 | 0.00 | 0.12 | 0.60 | 2.00 | 0.97 | 0.00 | 0.12 | 0.00 | 1.08 |
| ದಕ್ಷಿಣ ಕನ್ನಡ | 0.70 | 0.20 | 0.17 | 0.34 | 0.14 | 0.85 | 0.00 | 1.55 | 0.00 | 0.00 | 0.00 | 0.12 | 0.12 |
| ದಾವಣಗೆರೆ | 5.72 | 16.00 | 7.64 | 3.62 | 4.72 | 31.97 | 0.00 | 37.70 | 15.98 | 0.28 | 3.69 | 4.71 | 24.67 |
| ಧಾರವಾಡ | 1.38 | 0.31 | 0.18 | 0.83 | 0.40 | 1.73 | 0.53 | 2.58 | 0.36 | 0.10 | 1.08 | 0.17 | 1.71 |
| ಗದಗ | 9.72 | 5.68 | 1.42 | 0.79 | 1.00 | 8.90 | 0.00 | 18.61 | 5.78 | 0.58 | 1.83 | 0.90 | 9.09 |
| ಹಾಸನ | 0.60 | 0.04 | 0.05 | 0.00 | 0.04 | 0.13 | 0.00 | 0.74 | 0.00 | 0.04 | 0.05 | 0.02 | 0.11 |
| ಹಾವೇರಿ | 2.59 | 0.04 | 0.05 | 0.00 | 0.31 | 0.40 | 0.00 | 2.99 | 0.03 | 0.05 | 0.00 | 2.29 | 2.38 |
| ಕಲಬುರ್ಗಿ | 0.96 | 2.51 | 0.00 | 0.28 | 0.00 | 2.80 | 0.95 | 2.80 | 0.36 | 2.15 | 0.28 | 0.00 | 2.80 |
| ಕೊಡಗು | 2.30 | 0.13 | 0.18 | 0.00 | 0.00 | 0.31 | 0.00 | 2.61 | 0.00 | 0.03 | 0.03 | 2.54 | 2.60 |
| ಕೋಲಾರ | 0.37 | 0.00 | 0.28 | 1.26 | 0.00 | 1.54 | 0.00 | 1.91 | 0.00 | 0.00 | 0.00 | 0.00 | 0.00 |
| ಕೊಪ್ಪಳ | 2.78 | 1.57 | 1.96 | 0.17 | 1.67 | 5.36 | 0.00 | 8.15 | 1.31 | 2.03 | 0.44 | 1.66 | 5.43 |
| ಮಂಡ್ಯ | 0.71 | 0.01 | 0.46 | 0.00 | 0.02 | 0.49 | 0.40 | 0.79 | 0.21 | 0.47 | 0.01 | 0.10 | 0.79 |
| ಮೈಸೂರು | 3.63 | 0.89 | 0.32 | 0.08 | 0.32 | 1.61 | 2.01 | 3.23 | 2.57 | 0.21 | 0.02 | 0.08 | 2.89 |
| ರಾಯಚೂರು | 6.52 | 2.04 | 2.27 | 1.83 | 0.00 | 6.15 | 0.00 | 12.67 | 4.78 | 0.00 | 4.10 | 0.12 | 9.00 |
| ರಾಮನಗರ | 0.74 | 0.59 | 0.51 | 0.05 | 0.00 | 1.15 | 0.00 | 1.89 | 0.56 | 0.54 | 0.05 | 0.00 | 1.15 |
| ಶಿವಮೊಗ್ಗ | 0.56 | 0.09 | 0.02 | 0.05 | 0.00 | 0.17 | 0.00 | 0.72 | 0.09 | 0.02 | 0.00 | 0.00 | 0.11 |
| ತುಮಕೂರು | 2.53 | 0.38 | 0.02 | 0.08 | 0.95 | 1.42 | 0.00 | 3.95 | 0.00 | 0.09 | 0.02 | 1.62 | 1.73 |
| ಉಡುಪಿ | 0.53 | 0.03 | 0.08 | 0.05 | 0.03 | 0.19 | 0.00 | 0.72 | 0.05 | 0.05 | 0.09 | 0.06 | 0.26 |
| ಉತ್ತರ ಕನ್ನಡ | 0.31 | 0.00 | 0.00 | 0.00 | 0.00 | 0.00 | 0.00 | 0.31 | 0.00 | 0.00 | 0.00 | 0.00 | 0.00 |
| ವಿಜಯಪುರ | 3.66 | 2.10 | 0.48 | 0.00 | 1.86 | 4.44 | 0.43 | 7.66 | 2.51 | 2.15 | 0.34 | 1.50 | 6.49 |
| ಯಾದಗಿರಿ | 0.12 | 0.00 | 0.29 | 0.00 | 0.16 | 0.45 | 0.00 | 0.57 | 0.00 | 0.00 | 0.00 | 0.00 | 0.00 |
| **ಒಟ್ಟು** | **74.22** | **41.43** | **17.64** | **9.84** | **13.84** | **82.75** | **13.83** | **143.15** | **41.60** | **14.05** | **13.12** | **17.87** | **86.65** |

LCQ-2008

Annexure-2

| District | Taluk | Financial Year | Sites Distributed |
|---|---|---|---|
| Mysuru | Mysuru | 2017-2018 | 20 |
| Mysuru | T Narasipura | 2017-2018 | 92 |
| Mysuru | Periyapatna | 2019-2020 | 18 |
| Mysuru | Hunsur | 2019-2020 | 56 |
| Mysuru | | 2020-2021 | 23 |
| Mysuru | Krishnarajanagara | 2021-2022 | 55 |
| Mysuru | Mysuru | 2021-2022 | 72 |
| **Mysuru Total** | | | **336** |
| Tumakuru | Chikkanayakanahalli | 2018-2019 | 34 |
| Tumakuru | Gubbi | 2019-2020 | 12 |
| Tumakuru | | 2021-2022 | 1 |
| Tumakuru | Koratagere | 2019-2020 | 8 |
| Tumakuru | Kunigal | 2021-2022 | 10 |
| Tumakuru | Madhugiri | 2017-2018 | 433 |
| Tumakuru | | 2019-2020 | 21 |
| Tumakuru | | 2021-2022 | 3 |
| Tumakuru | Pavagada | 2019-2020 | 40 |
| Tumakuru | Sira | 2017-2018 | 843 |
| Tumakuru | | 2019-2020 | 216 |
| Tumakuru | | 2020-2021 | 253 |
| Tumakuru | | 2021-2022 | 240 |
| Tumakuru | Tiptur | 2019-2020 | 10 |
| Tumakuru | Turuvekere | 2019-2020 | 4 |
| **Tumakur Total** | | | 2128 |
| **Grand Total** | | | 2464 |

LCQ-2008

Annexure-3

| District | Town | Financial Year | Sites Distributed |
|---|---|---|---|
| Tumakuru | Chikkanayakanahalli TMC | 2019-2020 | 17 |
| Tumakuru | Koratagere TP | 2017-2018 | 15 |
| Tumakuru | Sira CMC | 2017-2018 | 103 |
| Tumakuru | Sira CMC | 2018-2019 | 101 |
| Tumakuru | Tiptur CMC | 2019-2020 | 25 |
| Tumakuru | Turuvekere TP | 2021-2022 | 11 |
| | **Total** | | 272 |